# ಇತ್ತೀಚಿನ ದಿನಗಳಲ್ಲಿ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಸಾಕಷ್ಟು ಅವಕಾಶ




ತುಮಕೂರು: ಇತ್ತೀಚಿನ ದಿನಗಳಲ್ಲಿ ಮುಂದಾಲೋಚನೆಯಿಲ್ಲದ, ಸುಸ್ಥಿರವಲ್ಲದ ಅನಿಯಂತ್ರಿಕ ಕಟ್ಟಡ ಮತ್ತು ನಗರ ನಿರ್ಮಾಣ ಚಟುವಟಿಕೆಗಳಿಂದ ಜಲಮೂಲಗಳು ಸಂಪೂರ್ಣ ಖಾಲಿಯಾಗಿ ಅಥವಾ ಮಹಾವೃಷ್ಟಿಯಿಂದಾಗಿ ಬೆಂಗಳೂರು ನಗರ ಮರಣ ನಗರಿಯಾಗುವ ನಿಖರ ಲಕ್ಷಣಗಳು ಕಂಡು ಬರುತ್ತಿವೆಯೆಂದು ಭಾರತೀಯ ವಿಜ್ಞಾನ ಸಂಸ್ಥೆಯ (ಐ.ಐ.ಎಸ್.ಸಿ) ಎನರ್ಜಿ ಮತ್ತು ವೆಬ್ ಲ್ಯಾಂಡ್ಸ್ ಸಂಶೋಧನಾ ತಂಡದ ಮುಖ್ಯಸ್ಥರಾದ ಡಾ.ಟಿ.ವಿ.ರಾಮಚಂದ್ರ ನುಡಿದರು.

ನಗರದ ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಜಿಯೋ ಇನ್ ಫಾರ್ಮೆಟಿಕ್ಸ್ ಫಾರ್ ಪ್ರುಡೆಂಟ್ ಮ್ಯಾನೇಜ್‌ಮೆಂಟ್ ಆಫ್ ನ್ಯಾಚುರಲ್ ರಿಸೋರ್ಸಸ್ ವಿಷಯದ ಬಗ್ಗೆ ಸಿವಿಲ್ ವಿಭಾಗದಿಂದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಉದ್ಘಾಟಿಸಿ ಮಾತನಾಡುತ್ತಾ ಅವರು ನಮ್ಮ ಪಾರಂಪಾರಿಕ ಜ್ಞಾನವಾದ ಮಳೆಯ ನೀರನ್ನು ಇಂಗಿಸುವಿಕೆ, ಜಲಾನಯನ ಅಭಿವೃದ್ಧಿ ಕೆರೆಗಳ ಹೂಳೆತ್ತುವಿಕೆ, ಗಿಡ ನೆಡುವಿಕೆಗಳನ್ನು ನೀಡಲಾಗುತ್ತದೆ. ಕೇವಲ ಕಾಂಕ್ರೀಟ್ ನೆಲಹಾಸು, ಹೆದ್ದಾರಿ ನಿರ್ಮಾಣ, ಕಟ್ಟಡ ನಿರ್ಮಾಣವೇ ಅಭಿವೃದ್ಧಿಯೆಂಬ ಹಗಲು ಗನಸಿನ ಹಿಂದೆ ಬಿದ್ದಿರುವ ಇಂಜಿನಿಯರುಗಳ ಭ್ರಮಾಲೋಕ ಮತ್ತು ಈ ಮೂಲಕ ಹೇಗಾದರೂ ಮಾಡಿ ಅಧರ್ಮದಿಂದ ಹಣ ಸಂಪಾದನೆ ಮಾಡಬೇಕೆಂಬ ಗುತ್ತಿಗೆದಾರರು ಮತ್ತು ಆಸೆಬರುವ ರಾಜಕಾರಣಿಗಳ ಅನೈತಿಕತೆಯಿಂದ ಬೆಂಗಳೂರು ಮಹಾಮರಣಕ್ಕೆ ಸಜ್ಜಾಗಿದೆಯೆಂದು ನುಡಿದರು.

ಸಾವಿರದ ನಾಲ್ಕು ನೂರಕ್ಕೂ ಹೆಚ್ಚು ಕೆರೆಗಳಿದ್ದ ಬೆಂಗಳೂರು ಭೂ ಪ್ರದೇಶ ಸದ್ಯದಲ್ಲಿ ಕೇವಲ ನೂರಕ್ಕೂ ಹೆಚ್ಚಷ್ಟೆ ಕೆರೆಗಳನ್ನು ಹೊಂದಿದ್ದು, ಅವುಗಳೂ ಕೂಡ ಕೆಟ್ಟ ನಿರ್ಮಾಣದಿಂದ ಹಾಳಾಗಿ ಬೆಂಗಳೂರಿನ ಹಸಿರು ಮುಚ್ಚಿಕೆ ಸುಮಾರು ನಲವತ್ತು ವರ್ಷಗಳ ಹಿಂದೆ ಶೇಕಡಾ 70 ರಷ್ಟಿದ್ದದ್ದು ಈಗ ಕೇವಲ ಶೇಕಡಾ ಇಪ್ಪತ್ತರ ಆಜುಬಾಜಿನಲ್ಲಿದ್ದು ಮಾನವ ಮತ್ತು ಮರಗಳ ಅಗತ್ಯದ ಸಮತೋಲನ ತಪ್ಪಿ ತಾಪಮಾನದ ಏರುಪೇರು, ಆಮ್ಲಜನಕದ ಕೊರತೆ ಮುಂದಿನ ದಿನಗಳಲ್ಲಿ ತೀವ್ರವಾಗಿ ಕಾಡಲಿದೆಯೆಂದರು.

ದೇಶದ ಅಭಿವೃದ್ಧಿಗೆ ಯುವ ಜನತೆಯೋ ಆಶಾಕಿರಣವೆಂದ ಅವರು ಯುವಕರು, ಮೊಬೈಲ್, ಟಿ.ವಿ.ಗಳ ಹಿಂದೆ ಬಿದ್ದು ಸಾಮಾಜಿಕ ಪ್ರಜ್ಞೆ, ಪರಿಸರದ ಬಗ್ಗೆ ಕಾಳಜಿಯನ್ನು ಕೇವಲ ಜಾಲತಾಣಗಳಲ್ಲಿ, ಫೇಸ್‌ಬುಕ್, ವ್ಯಾಟ್ಸಾಫ್ ಗಳಲ್ಲಿ ತೋರುವುದು ಬಿಟ್ಟು ಗಿಡನೆಡುವಿಕೆ ಜಲಸಂಪನ್ಮೂಲಗಳ ನಿರ್ವಹಣೆ, ಸುಸ್ಥಿರ ಅಭಿವೃದ್ಧಿಯೆಡೆಗೆ ಗಮನ ಹರಿಸಲೇಬೇಕಾದ ಅಗತ್ಯವಿದೆಯೆಂದರು. ಎತ್ತಿನ ಹೊಳೆ ಯೋಜನೆಯೆಂಬುದು ಕೇವಲ ಬೂಟಾಟಿಕೆಯ ಯೋಜನೆಯಾಗಿದ್ದು, ಯಾವುದೇ ಕಾರಣಕ್ಕೂ ಸುಳ್ಳು ವರದಿ ಮಾಡಿರುವಂತೆ 24 ಟಿ.ಎಂ.ಸಿ. ಅಡಿ ನೀರಿನ ಲಭ್ಯತೆಯಿಲ್ಲವಾದ್ದರಿಂದ ಸುಮಾರು ರೂ.13000 ಕೋಟಿ ಜನಸಾಮಾನ್ಯರ ತೆರಿಗೆ ಹಣ ರಾಜಕಾರಣಿಗಳಿಂದ ಗುಳುಂ ಸ್ವಾಹಾವಾಗಲಿದೆ ಮತ್ತು ರೈತರು ಅದನ್ನು ನೆಚ್ಚದೆ ಮಳೆ ನೀರಿನ ಉತ್ತಮ ನಿರ್ವಹಣೆ ಮಾಡುವುದರಲ್ಲಿ ಜಾಣ್ಮೆಯಿದೆಯೆಂದರು.

ಸಮಾರಂಭದಲ್ಲಿ ಶ್ರೀದೇವಿ ಛಾರಿಟಬಲ್ ಟ್ರಸ್ಟ್‌ನ ಮಾನವ ಸಂಪನ್ಮೂಲ ಮತ್ತು ಮಾಹಿತಿ ತಂತ್ರಜ್ಞಾನ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಉಪನ್ಯಾಸದ ವಿಷಯಗಳು ವಿದ್ಯಾರ್ಥಿಗಳಿಗೆ ಕಣ್ಣು ತೆರೆಸುವ ಜ್ಞಾನವಾಗಿದ್ದು ಸದುಪಯೋಗ ಪಡಿಸಿಕೊಂಡು ವೃತ್ತಿಯಲ್ಲಿ ಅಳವಡಿಸಿಕೊಳ್ಳಬೇಕೆಂದರು. ಕು.ಐಶ್ವರ್ಯ ಹಾಗೂ ಕು. ಶಾರದಾಮಣಿ ನಿರ್ವಹಿಸಿ ಡಾ. ಎಂ.ಎ.ನಾಗೇಶ್ ವಂದಿಸಿದರು. ಡೀನ್ ಡಾ.ಎಸ್.ಎಂ.ಶಶಿಧರ್, ಡಾ.ಎನ್.ಚಂದ್ರಶೇಖರ್, ಪ್ರೊ.ಸಿ.ನಾಗರಾಜ್, ಪ್ರೊ.ಮನೋಜ್ಞ ಮತ್ತು ಬೋಧಕ ಮತ್ತು ಬೋಧಕೇತರ ವರ್ಗದವರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.